ಓ ಎಸ್ ನಂ.86/2022
ಪಿ.ಡಬ್ಲ್ಯು-1 ಶಿವಾನಂದ ತಂದೆ ಹಣಮಂತ ಪುಲಾರಿ

**(ಇಂದು ದಿನಾಂಕಃ 23-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಜೆ ಜಿ ವಕೀಲರಿಂದ.

ಸರ್ವೆ ನಂಬರ ೧೯೬/ಬ ರ ೭ ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು ೬ ಎಕರೆ ಮೇಲೆ ಗುಂಟೆ ಇರುತ್ತದೆ. ಎಲ್ಲರೂ ಸೇರಿ ಸುಮಾರು ೨೬ ಎಕರೆ ಜಮೀನು ಮಹಾರಾಷ್ಟ್ರದಲ್ಲಿ ಖರೀದಿ ಮಾಡಿದ್ದೇವು ಈಗ ಎಲ್ಲರ ಹೆಸರಿನಲ್ಲಿ ಸದರಿ ಜಮೀನು ಮಾಡಿಕೊಂಡಿದ್ದು, ನನ್ನ ಹೆಸರಿನಲ್ಲಿ ೬ ಎಕರೆ ಇರುತ್ತದೆ ಎನ್ನುತ್ತಾರೆ. ನನ್ನ ತಂದೆ-ತಾಯಿಯನ್ನು ನಾನು ನೋಡಿಲ್ಲ. ೧ನೇ ಪ್ರತಿವಾದಿಯೆ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಪುಣೆಗೆ ದುಡಿಯಲು ಹೋಗಿದ್ದರಿಂದ ನನ್ನ ತಂದೆ-ತಾಯಿ ೧ನೇ ಪ್ರತಿವಾದಿಯ ಹತ್ತಿರ ಇರುತ್ತಾರೆ ನಾವೆಲ್ಲರೂ ಕೂಡಿಯೆ ಇರುತ್ತೇವೆ, ನಾನು ದುಡಿದು ತಂದು ಹಣ ನೀಡಿರುತ್ತೇನೆ ಎನ್ನುತ್ತಾರೆ.

೨. ನನ್ನ ಮದುವೆಯನ್ನು ನನ್ನ ತಂದೆ-ತಾಯಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನಾನು ದುಡಿದು ತಂದು ನನ್ನ ತಂದೆ-ತಾಯಿಗೆ ಹಣ ನೀಡಿರುತ್ತೇನೆ ಅವರು ನನ್ನನ್ನು ಜೋಪಾನ ಮಾಡಿ ನನ್ನ ಮದುವೆ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಮೊದಲನೆಯ ಹೆಂಡತಿ ಮೃತರಾಗಿರುತ್ತಾರೆ ಎಂದರೆ ಸರಿ. ೭-೮ ಲಕ್ಷ ರೂಪಾಯಿ ಖರ್ಚು ಮಾಡಿ, ನನ್ನ ತಂದೆ-ತಾಯಿ ನನಗೆ ೨ನೇಯ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಪಾರ್ಶ್ವವಾಯು ಹೊಡೆದಿತ್ತು ಎಂದರೆ ಸರಿ. ನನ್ನ ತಮ್ಮನಾದ ೧ನೇ ಪ್ರತಿವಾದಿ ನನ್ನ ತಂದೆಗೆ ಸುಮಾರು ೪-೫ ಲಕ್ಷ ರೂಪಾಯಿ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ

ತಾಯಿಯನ್ನು ನೋಡಿದ ಕಾರಣ ಅವರು ನನ್ನ ತಮ್ಮನಾದ ೧ನೇ ಪ್ರತಿವಾದಿಗೆ ದಾನಪತ್ರ ಮಾಡಿ, ಜಮೀನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರಿಗೆ ಪಾರ್ಶ್ವವಾಯು ಹೊಡೆದಿದ್ದರಿಂದ ಅವರಿಗೆ ಏನು ತಿಳಿಯುತ್ತಿರಲಿಲ್ಲ ಎನ್ನುತ್ತಾರೆ. ಪ್ರಕಾಶ ಮತ್ತು ಅವರ ಹೆಂಡತಿರವರು ಅವರ ಮಗಳನ್ನು ನೋಡಿಕೊಳ್ಳುವ ವಿಚಾರವಾಗಿ ೧ನೇ ಪ್ರತಿವಾದಿಗೆ ೫ ಎಕರೆ ಜಮೀನು ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ದಾವಾ ಜಮೀನುಗಳನ್ನು ೧ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಂದೆಗೆ ಅದನ್ನು ಮಾಡಿಕೊಂಡಿರುವುದು ತಿಳಿದಿರುವುದಿಲ್ಲ ಎನ್ನುತ್ತಾರೆ. ನನ್ನ ತಮ್ಮನಿಗೆ ಆಸ್ತಿ ನೀಡಿದ ವಿಚಾರ ನನಗೆ ಗೊತ್ತಿದ್ದರು ಸಹ ಈಗ ನನ್ನ ತಂದೆ ತಾಯಿ ತೀರಿದ ನಂತರ ನಾನು ಪ್ರತಿವಾದಿಗಳ ಮೇಲೆ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.